ಕೊಡ್ತಾರೆ. ಚಾ ಕುಡಿಯುವಾಗ ಚಾ, ಅಷ್ಟೆ. ಎಲ್ಲಾದ್ರೂ ಕೆಲ್ಸ ಸಿಗುತ್ತಾಂತ ಹುಡುಕ್ತಾ ಇದ್ದೇನೆ. ಆದ್ರೆ ಕಾಫಿ ಗಿಡದ ಕೆಲ್ಸ ಗೊತ್ತಿಲ್ಲ ಸಾರ್.'

ದೊಡ್ಡ ಎಸ್ಟೇಟಿನ ಮಧ್ಯದ ಬಂಗಲೆಯಲ್ಲಿ ಶೀಲಾ ಒಂಟಿಯಾಗಿರುವುದನ್ನು ತಪ್ಪಿಸುವುದಕ್ಕೆ ದೀಪೂವನ್ನು ತನ್ನ ಮನೆಯಲ್ಲಿ ಇರಿಸಿಕೊಂಡರೆ ಹೇಗೆ ಅನ್ನೋ ಯೋಚನೆ ಅವರ ತಲೆಗೆ ಬಂತು. ಮೇಲಾಗಿ ದೀಪೂ ಅನಾಥ ಕೂಡ. ದೀಪೂ ಒಪ್ಪಿಕೊಳ್ಳುವುದು ಕಷ್ಟವಾಗಲಿಲ್ಲ. ಅಂಥ ಅಭಯಾಶ್ರಯಕ್ಕಾಗಿ ಆತ ಕಾಯುತ್ತಲೂ ಇದ್ದ. ಶೀಲಾಳಿಗಂತೂ ಇದರಿಂದ ಪರಮತೃಪ್ತಿ. ನವದುರ್ಗಾ ಎಸ್ಟೇಟಿನಿಂದ ತಮ್ಮ ಮನೆಗೆ ಆಮದಾಗಿದ್ದ ಚಿನ್ನ ಬಹುದಿನಗಳಿಂದ ಶೀಲಾಳನ್ನು ಕಾಡುತ್ತಿತ್ತು. ಮಲಗುವ ಕೋಣೆಯಲ್ಲಿ ಭದ್ರವಾಗಿ ಇರಿಸಿದ್ದರೂ ಚಿನ್ನ ಚಿನ್ನ ತಾನೆ?

'ಅಷ್ಟೊಂದು ಭಯವಿದ್ದರೆ ಅದನ್ನು ಲಾಕರ್‌ನಲ್ಲಿ ಇಡಬಾರದೆ?' ಪ್ರೊ. ಭಾಸ್ಕರ್ ಕೇಳಿದ್ದರು.

'ಆಗಾಗ ಅದರ ಅಗತ್ಯ ಬರುತ್ತದೆ. ಒಮ್ಮೆ ತೊಟ್ಟ ಆಭರಣ ಮತ್ತೊಮ್ಮೆ ಅಷ್ಟೇ ವೇಗವಾಗಿ ನಾನು ತೊಡುವ ಕ್ರಮವಿಲ್ಲ. ನನ್ನ ಆಭರಣಗಳೆಲ್ಲ ಬೇಕಾದಾಗ ಕೈಗೆ ಸಿಗುವಂತಿರಬೇಕು. ಅದು ಶೀಲಾಳ ರೀತಿ.'

ಅಮ್ಮ ತನ್ನ ಮಗಳ ಮನಸ್ಸಿಗೆ ಹೊಂದಿಕೊಳ್ಳುವಂತೆ ಮಾಡಿಸಿಕೊಟ್ಟ ಆಭರಣಗಳವು. ದೀಪೂ ಬಂದ ಮೇಲೆ ಮನೆಯೊಳಗೆ ಅಡರಿಕೊಂಡಿದ್ದ ಭೀತಿ ಇಲ್ಲವಾಯಿತು. ಔಟ್‌ಹೌಸಿನ ಮುಂಭಾಗದ ಕೋಣೆಯೊಂದನ್ನು ಅವನಿಗಾಗಿ ತೆರವುಗೊಳಿಸಿದ್ದರು. ಮನೆಯಿಡೀ ಓಡಾಡಿ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದ ದೀಪೂ ಬಲುಬೇಗ ಇಬ್ಬರಿಗೂ ಬೇಕಾದವನಾದ. ಮುಂಜಾನೆಯೆದ್ದು ಪ್ರೊ. ಭಾಸ್ಕರ್ ನಿತ್ಯವಿಧಿಗಳನ್ನು ತೀರಿಸಿ ಹೊರಟರೆಂದರೆ ಮತ್ತೆ ರಾತ್ರಿಯ ತನಕ ಇಬ್ಬರೇ ಮನೆಯಲ್ಲಿ. ಒಮ್ಮೆ ಮನೆಕೆಲಸ ಮುಗಿದ ಮೇಲೆ ಮತ್ತಿನ್ನೇನು? ಅಮ್ಮಾವ್ರೆ, ಅಮ್ಮಾವ್ರೆ ಅನ್ನುತ್ತಾ ಶೀಲಾಳ ಹಿಂದೆ ಮುಂದೆ ಅಲೆಯುತ್ತಿದ್ದ. ಇಬ್ಬರೂ ತೋಟದುದ್ದಕ್ಕೂ ಅಲೆದಾಡಿ ಬರುತ್ತಿದ್ದರು. ಮಧ್ಯಾಹ್ನದ ಮೇಲೆ ಪೂರ್ತಿ ಬಿಡುವಿದ್ದ ದಿನ ಅವರಿಬ್ಬರೂ ಸೇರಿ ಕರಿಮಾಯಿ ಗುಡ್ಡದ ತಡಿಭಾಗದ ಬೋಳುಗುಡ್ಡಗಳನ್ನು ಹತ್ತೋದುಂಟು. ದೀಪೂಗೆ ಗುಡ್ಡ ಹತ್ತೋದೆಂದರೆ ಎಲ್ಲಿಲ್ಲದ ಆಸಕ್ತಿ. ತಾನು ಮೇಲೇರುತ್ತಾ ಒಡತಿಯನ್ನೂ ಮೇಲೇರಿಸುತ್ತಾ ಸಾಧ್ಯವಾದಷ್ಟೂ ಎತ್ತರಕ್ಕೆ ಏರಿ ಕುಳಿತುಕೊಂಡು ನಿಸರ್ಗ ವೀಕ್ಷಣೆ ಮಾಡುತ್ತಿದ್ದರು. ದಟ್ಟ ಕಾಡನ್ನು ನುಗ್ಗುವುದು ಮಾತ್ರ ಶೀಲಾಳಿಗೆ ಆಗದ ಕೆಲಸ. ಕಾಡೆಂದರೆ ಆಕೆಗೆ ಭಯ. ಆದರೆ ಪ್ರಕೃತಿಯನ್ನು ಆಸ್ವಾದಿಸುವ ಚೈತನ್ಯ ಆಕೆಗಿದೆ. ಅದು ಪ್ರೊ. ಭಾಸ್ಕರ್‌ರಿಗೂ ಗೊತ್ತು. ಹಾಗೆ ತಿರುಗಾಡಲು ಹೋಗುವಾಗಲೆಲ್ಲ ಪ್ರೊ. ಭಾಸ್ಕರ್ ಅಮೆರಿಕದಿಂದ ತಂದ ಕ್ಯಾಮೆರಾವನ್ನು ದೀಪೂ ಹೆಗಲಿಗೇರಿಸಿಕೊಳ್ಳುತ್ತಿದ್ದ. ಕ್ಯಾಮೆರಾಕ್ಕೆ ಮುಖ ಕೊಟ್ಟು ನಿಲ್ಲುವ ಯಾವುದೇ ಅವಕಾಶವನ್ನು ಶೀಲಾಳಂತೆ ದೀಪೂ ಕೂಡ ತಪ್ಪಿಸಿಕೊಳ್ಳುತ್ತಿರಲಿಲ್ಲ.

(ಸಶೇಷ)

# ಪ್ರತಿಕ್ರಿಯೆ




## ಬುದ್ಧಯಾನ ಅದ್ಭುತ!

ಒಂಬತ್ತು ಕಂತುಗಳಲ್ಲಿ ಬಂದ ಕಂನಾಡಿಗಾ ನಾರಾಯಣ ಅವರ ಬುದ್ಧಯಾನ ಅದ್ಭುತವಾಗಿತ್ತು. ಬುದ್ಧನನ್ನು ಕೇಂದ್ರಬಿಂದುವಾಗಿರಿಸಿಕೊಂಡು ಉಳಿದ ಪಾತ್ರಗಳಾದ ಶುದ್ಧೋಧನ, ಪ್ರಜಾಪತಿ, ಯಶೋಧರೆ, ದೇವದತ್ತ, ಆಮ್ರಪಾಲಿ, ಕಿಸಾ ಮುಂತಾದವರು ಸುತ್ತಲೂ ಸುತ್ತುವ ಗ್ರಹಗಳಂತೆ ಬುದ್ಧನ ಬಗೆಗೆ ವಿವರಣೆ ಕೊಟ್ಟ ವಿಶಿಷ್ಟ ಶೈಲಿ ಚೆನ್ನಾಗಿತ್ತು. ಭಾಷೆ ಮತ್ತು ಲೇಖನ ಹೆಣೆಯುವಿಕೆ ಸುಂದರ. ಲೇಖಕರಿಗೆ ಅಭಿನಂದನೆಗಳು.

— ವಿನುತಾ ಹಂಚಿನಮನಿ, ಧಾರವಾಡ

## ನೂತನ ಹೊಳಹು

ಸುಮಾರು ಎರಡು ಎರಡೂವರೆ ತಿಂಗಳು ಮೂಡಿಬಂದ ಧಾರಾವಾಹಿ ತನ್ನ ಹೊಸತನದಿಂದ ಪ್ರತಿವಾರವೂ ಓದಿಸಿಕೊಂಡು ಹೋಯಿತು. ಜೊತೆಗೆ ಬುದ್ಧನ ಹುಟ್ಟು, ಬಾಲ್ಯ, ಮಹಾಪರಿನಿರ್ವಾಣ ಸೇರಿದಂತೆ ಬುದ್ಧನ ಜೀವನದ ಕುರಿತಾಗಿ ಅನೇಕ ನೂತನ ಹೊಳಹುವಿನೊಂದಿಗೆ ಮನವನ್ನು ಆವರಿಸಿತು. ಸಿದ್ಧಾರ್ಥನ ಚರಿತ್ರೆಯೊಂದಿಗಿನ ಈ ಬುದ್ಧಯಾನ ಒಂಬತ್ತು ವಾರ ಸಾಗಿದ್ದೇ ಗೊತ್ತಾಗಲಿಲ್ಲ. ಇನ್ನಷ್ಟು ಬುದ್ಧ ದರ್ಶನ ಆಗಿದ್ದರೆ ಚೆನ್ನಾಗಿತ್ತೇನೋ ಎಂದೆನಿಸಿತು.

—ಮಲ್ಲಿಕಾರ್ಜುನ ಶೆಲ್ಲಿಕೇರಿ, ಬಾಗಲಕೋಟೆ

## ಬುದ್ಧಂ ಶರಣಂ ಗಚ್ಛಾಮಿ...

ಬುದ್ಧ ನಡೆದುಬಂದ ಹಾದಿ ಮರೆಯಲಾಗದ ಅನುಭವ ನೀಡಿತು. ಬುದ್ಧನ ಅನುಯಾಯಿಗಳಿಗೆ ದೊರಕಿದ ಜ್ಞಾನೋದಯ, ಹಾಗೂ ಬುದ್ಧನ ಕಾಣಲು ಬಂದ ನೂರಾರು ಮಂದಿ ಬುದ್ಧನ ಕಾರುಣ್ಯಕ್ಕೆ ಒಳಗಾಗಿ ಬದುಕಿನ ಪಥವನ್ನು ಬದಲಿಸಿಕೊಂಡವರು ಬದುಕಿನ ಕ್ಷಣ ಬಂಗುರತೆ ಅರಿತವರು. ಹೀಗೆ ತುಂಬಾ ಚೆನ್ನಾಗಿ ಧಾರಾವಾಹಿ ಮೂಡಿಬಂತು. ಪೂರಕವಾಗಿ ಮೋನಪ್ಪನವರ ಕಲೆ ಬುದ್ಧನ ನಗು ಮುಖ ಮನಸಿಗೆ ಮುದ ನೀಡಿತು. ಬುದ್ಧನ ಅಂತ್ಯಕಾಲದಲ್ಲೂ ಆರೋಗ್ಯ ಸಮಸ್ಯೆ ಯಿಂದ ಬಳಲುತ್ತಿದ್ದರು ಸಹ ತನ್ನ ಸಿದ್ಧಾಂತಕ್ಕೆ ಬದ್ಧನಾಗಿದ್ದು ದೇಹಾಂತ್ಯ ಹೊಂದಿದ್ದು ಕಣ್ಣಲ್ಲಿ ನೀರು ತರಿಸಿತು. ವ್ಯಕ್ತಿತ್ವಕ್ಕೆ ನಮೋ ನಮಃ.

—ಭಾರತೀ ಗಂಗಾಧರ್, ಬೆಂಗಳೂರು

## ಬಾಲ್ಯದಲ್ಲಿ ಓದಿದ ನೆನಪಾಯಿತು

ಒಂಬತ್ತು ವಾರಗಳಿಂದ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿದ ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿಬಂದಿದೆ. ನಾನು ಬಾಲ್ಯದಲ್ಲಿ ನನ್ನ ವಿಧ್ಯಾಭ್ಯಾಸದಲ್ಲಿ ಬುದ್ಧನ ಜೀವನ ಚರಿತ್ರೆ ಬೌದ್ಧ ಧರ್ಮದ ಬಗ್ಗೆ ಓದಿದ ನೆನಪಾಯಿತು. ಇಂತಹ ಧಾರಾವಾಹಿಗಳು ಮೂಡಿಬರಲಿ. ಧಾರಾವಾಹಿ ಪ್ರಕಟಿಸಿದ 'ಸುಧಾ' ಬಳಗಕ್ಕೆ ಧನ್ಯವಾದಗಳು.

—ಪಿ.ಹೆಚ್. ಪಾಟೀಲ್, ರಾಣೆಬೆನ್ನೂರು

## ತಿಳಿವಳಿಕೆ ಹೆಚ್ಚಿಸಿತು

ಬುದ್ಧನ ಬಗ್ಗೆ ಚರಿತ್ರೆ ಪಾಠದಲ್ಲಿ ಅಲ್ಪಮಾತ್ರ ಅರಿತಿದ್ದ ನಮಗೆ ಬುದ್ಧ ಹಾಗೂ ಅವರ ಸಮಕಾಲೀನರ ಬಗ್ಗೆ ವಿವರವಾಗಿ ತಿಳಿಸಿಕೊಟ್ಟ ಕಥೆಗಾರರಿಗೆ ಹಾಗೂ ಸುಂದರ ಚಿತ್ರ ರಚಿಸಿದ ಕಲಾವಿದರಿಗೆ ವಂದನೆಗಳು.

—ಕೆ. ಕೃಷ್ಣಕುಮಾರಿ, ಬೆಂಗಳೂರು

## ಬುದ್ಧ ಚಿರಾಯು

ಬುದ್ಧ– ಜಗವೆಲ್ಲ ಮಲಗಿರಲು ಅವನೊಬ್ಬ ಎದ್ದ ಎಂಬಂತೆ ಇಡೀ ಜಗತ್ತಿಗೆ ಜ್ಞಾನ ದೀವಿಗೆಯ ಬೆಳಕನ್ನು ಚೆಲ್ಲಿ 'ಆಸೆಯೇ ದುಃಖಕ್ಕೆ ಮೂಲ' ಸತ್ಯ–ಅಹಿಂಸಾ ನೀತಿಗಳನ್ನು ಉಪದೇಶಿಸಿ ಕೋಟಿಗಟ್ಟಲೆ ಅನುಯಾಯಿಗಳನ್ನು ಅನುಸರಿಸುವಂತೆ ಮಾಡಿ, ಬೃಹತ್ ಧರ್ಮವೊಂದನ್ನು ಸ್ಥಾಪಿಸಿದ ಗೌತಮ ಬುದ್ಧ ಚಿರಾಯು. ಅವರ ಚರಿತ್ರೆಯನ್ನು ಅತ್ಯಂತ ಸರಳ ಸಂಕ್ಷಿಪ್ತವಾಗಿ ಬರೆದ ಲೇಖಕರು, ಪ್ರಕಟಿಸಿರುವ 'ಸುಧಾ'ಕ್ಕೆ ಧನ್ಯವಾದಗಳು.

—ಟಿ.ವಿ. ರಘೋತ್ತಮ, ಮೈಸೂರು

## ವಿಶಿಷ್ಟ ಶೈಲಿ

ಧಾರಾವಾಹಿ ತುಂಬ ಆಸಕ್ತಿದಾಯಕವಾಗಿ ಓದಿಸಿಕೊಂಡು ಹೋಯಿತು. ಯಾನದ ಪ್ರತಿಹಂತಗಳಲ್ಲೂ ಮನಮುಟ್ಟುವಂತೆ ಓದುಗರನ್ನು ಹಿಡಿದಿಟ್ಟಿದ್ದಾರೆ. ಬರವಣಿಗೆಯ ಶೈಲಿ ವಿಶಿಷ್ಟವಾಗಿತ್ತು.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಸರಾಗವಾಗಿ ಓದಿಸಿಕೊಂಡಿತು

ಧಾರಾವಾಹಿ ಮೊದಲ ಕಂತಿನಿಂದಲೂ ಸರಾಗವಾಗಿ ಓದಿಸಿಕೊಂಡು ಹೋಯಿತು. ಬುದ್ಧನ ಪಾತ್ರದ ಜೊತೆಗೆ ಕಿಸಾಗೋತಮಿ, ಅಂಗುಲಿಮಾಲ, ಆನಂದ ಮುಂತಾದವರ ಪಾತ್ರ ವಿವರಣೆ ಅದ್ಭುತವಾಗಿತ್ತು.

—ವಿನಾಯಕ, ಬೆಂಗಳೂರು